**ಓಎಸ್.ನಂ :** 62/2023

ಪಿಡಬ್ಲ್ಯೂ:1

## ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ

ದಿನಾಂಕಃ 07.08.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನನ್ನು ಮೃತ ತಿರುಕಪ್ಪ ಈಗೆ 43 ವರ್ಷಗಳ ಹಿಂದೆ ಮದುವೆಯಾಗಿರುತ್ತಾರೆ. ತಿರುಕಪ್ಪನವರು ನನ್ನನ್ನು ವಿವಾಹ ಆಗಿದ್ದಾರೆ ಎಂಬುವುದಕ್ಕೆ ಸಂಬಂಧಿಸಿದಂತೆ ವಿವಾಹ ಆಮಂತ್ರಣ ಪತ್ರಿಕೆ ಮತ್ತು ಇತರೆ ದಾಖಲೆಗಳು ಇರುವುದಿಲ್ಲ. ನನಗೆ ಒಬ್ಬಳು ಮಗಳಿದ್ದಾಳೆ. ಸದರಿ ಮೃತ ತಿರುಕಪ್ಪನವರಿಗೆ 3 ಎಕರೆ ಜಮೀನು ಇದೆ. ನನ್ನ ಯಜಮಾನರ ಅಣ್ಣ ತಮ್ಮಂದಿರಿಗೂ ತಲಾ ಒಂದೊಂದು ಎಕರೆ ಜಮೀನು ಬಂದಿತ್ತು ಅವರು ಈಗಾಗಲೇ ಮಾರಾಟ ಮಾಡಿಕೊಂಡಿರುತ್ತಾರೆ. ನನ್ನ ಮಗಳು ಎಂ.ಎ ಬಿಎಡ್ ವ್ಯಾಸಂಗ ಮಾಡಿದ್ದಾಳೆ ಈ ಸಂಬಂಧವಾಗಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸದೆ ಇದ್ದರೂ ಸಹ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಮಗಳ ಶಾಲಾ- ಕಾಲೇಜು ದಾಖಲೆಗಳಲ್ಲಿ ನನ್ನ ಮಗಳ ತಂದೆಯ ಹೆಸರು ನಮೂದಾಗಿಲ್ಲ ಆ ಕಾರಣಕ್ಕಾಗಿ ಸದರಿ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಸೃಷ್ಟಿಸಿ ಮೃತ ತಿರುಕಪ್ಪನವರಿಗೆ ಸೇರಿದ ಆಸ್ತಿಯನ್ನು ಕಬಳಿಸಬೇಕೆಂದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದೇವದಾಸಿ ನಿರ್ಮೂಲನಾ ಯೋಜನಾದಡಿಯಲ್ಲಿ ಸರ್ಕಾರಿದಿಂದ ಮಾಸಾಸನ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮೃತ ತಿರುಕಪ್ಪನಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ತಿರುಕಪ್ಪನ ವಾರಸುದಾರರು ಎಂಬುವುದಾಗಿ ಪರಿಹಾರ ಕೋರಿ ಪಿ.ಅಂಡ್.ಎಸ್.ಸಿ ನಂ. 2/2019 ನ್ನು ಸಲ್ಲಿಸಿದ್ದೆ ಎಂದರೆ ಸರಿ. ಆ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ಈ ದಾವಾ ಪತ್ರದಲ್ಲಿ ತಿಳಿಸಿರುವುದಿಲ್ಲ. ಬಿಡಿಸಿಸಿ ಬ್ಯಾಂಕ್ ನಲ್ಲಿ ನನ್ನ ಗಂಡನ ಹೆಸರಿನಲ್ಲಿ ಎಫ್.ಡಿ ಆಗಿರುವ ಹಣ ಇದೆ. ನನ್ನ ಗಂಡನ ಬ್ಯಾಂಕ್ ಎಫ್.ಡಿ ಯಲ್ಲಿ ಮರಿದೇವಮ್ಮ ಅಲಿಯಾಸ್ ಮರಿದೇವಕ್ಕ ರವರನ್ನು ನಾಮನಿರ್ದೇಶನ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಎಫ್.ಡಿ ಬಾಂಡ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ.

ನಿಪಿ-1 ರಲ್ಲಿ ನನ್ನನ್ನು ನಾಮೀನಿಯಾಗಿ ಸೂಚಿಸಿರುವ ಕಾರಣ ನಾನು ಅವರ ಹೆಂಡತಿ ಎಂಬುವುದಾಗಿ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನಾನು ತಿರುಕಪ್ಪನವರನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ತಿರುಕಪ್ಪನ ಮಗಳಲ್ಲ ಎಂದರೆ ಸರಿಯಲ್ಲ. ನಾನು ತಿರುಕಪ್ಪನ ಹೆಂಡತಿ ಅಲ್ಲದ ಕಾರಣ ನಾನು ಅವರ ವಾರಸುದಾರರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**